ಚಿಂತಾಮಣಿ ತಾಲ್ಲೂಕಿನ ಚೀಮನಹಳ್ಳಿಯ ರಮೇಶಬಾಬು ವೃತ್ತಿಯಿಂದ ಸಂಶೋಧನಾ ವಿಜ್ಞಾನಿ. ಕವಿಯಾಗಿ, ಕಥೆಗಾರರಾಗಿ ಓದುಗರಿಗೆ ಪರಿಚಿತರು. ಹೊಸ ತಲೆಮಾರಿನ ಕಾದಂಬರಿಕಾರರಲ್ಲಿ ಅವರದು ಪ್ರಮುಖ ಹೆಸರು. 'ಪ್ರಶ್ನೆ ಮತ್ತು ದೇವರು', 'ಎರಡು ಲೋಟಗಳು', 'ಮಾಯಾ ಸರೋವರ' ಪ್ರಕಟಿತ ಕವನಸಂಕಲನಗಳು. 'ನಾಗ್ದಾಳೆ' ಖಂಡಕಾವ್ಯ. 'ಹಸ್ತಬಲಿ' ಕಥಾಸಂಕಲನ. 'ಹದ', 'ಬಲಿಹಾರ', 'ಟೈರ್ಸಾಮಿ' ಹಾಗೂ 'ಮಂಪರು' ಪ್ರಕಟಗೊಂಡಿರುವ ಕಾದಂಬರಿಗಳು.

ಹಾಗಾದರೆ ಆ ಶಿವಾರೆಡ್ಡಿ ಹೇಳಿದ್ದು ನಿಜವೆ? ಪ್ರತಿನಿತ್ಯ ದಿನಕ್ಕೆ ನೂರು ಬಾರಿಯಾದರೂ ಶನಿ ಮಹಾತ್ಮೆ ಕಥೆಯ ಪದ್ಯಗಳನ್ನು ತಾನು ಹಾಡುವುದಿಲ್ಲವೆ? ಕಥೆಯ ಕೊನೆಯಲ್ಲಿ ವಿಕ್ರಮರಾಜನಿಗೆ ಶನಿದೇವ, ತನ್ನನ್ನು ಯಾರು ಭಕ್ತಿಯಿಂದ ನಮಿಸಿ ತನ್ನ ಕಥೆಯನ್ನು ಪಾರಾಯಣ ಮಾಡುತ್ತಾರೋ ಅಂತಹ ರೂಢಿವಂತರಿಗೆ ತಾನು ಕಷ್ಟ ಕೊಡುವುದಿಲ್ಲ, ಅಂತವರು ಸುಖ ಸಮೃದ್ಧಿಯಿಂದ ಬಾಳುತ್ತಾರೆ ಎಂದು ಹೇಳಿದ್ದಾನಲ್ಲವೆ? ಹೀಗಿದ್ದರೂ ತನಗೆ ಮದುವೆಯ ಯೋಗ ಕೂಡಿಬರುತ್ತಿಲ್ಲವಲ್ಲ ಎಂದು ಯೋಚಿಸುತ್ತಲೆ ಅಡ್ಡಾಡತೊಡಗಿದ.

ಈಗಾಗಲೇ ಐವತ್ತು ವರ್ಷ ತುಂಬಿರುವ ಅವನಿಗೆ ಇನ್ನ್ಯಾರು ಹೆಣ್ಣನ್ನು ಕೊಡುತ್ತಾರೆ? ಒಂಟಿಯಾಗೆ ಇರಬೇಕಷ್ಟೆ ಎಂದು ಮೊನ್ನೆ ತಾನೆ ಮನೆಗೆ ಬಂದಿದ್ದ ಆಲವಟ್ಟದ ವೆಂಕಟರೆಡ್ಡಿ ತನ್ನ ಅಣ್ಣನ ಬಳಿ ಹೇಳುತ್ತಿರುವುದನ್ನು ಗಂಗಿರೆಡ್ಡಿ ಕೇಳಿಸಿಕೊಂಡಿದ್ದ. ಆಗ ಗಂಗಿರೆಡ್ಡಿಯ ಅಣ್ಣ 'ಗಂಡಸಿಗೆಂತಾ ವಯಸ್ಸೊ... ನಲವತ್ತಕ್ಕೆ ನರೀತು ಅಂತಂದ್ರೆ ಮದುವೆ ಆಗ್ದೆ ಇರಕ್ಕಾಯ್ತದ? ಅದಕೂ ಮಿಂಚಿ ಆಗಿಲ್ಲ ಅಂತಿಟ್ಕೊ... ನನ್ನ ದೊಡ್ಡ ಮಗ ಅವ್ನು... ರಾಜ, ರಾಜನ್ತರಾ ನೋಡ್ಕೋತೀನಿ' ಎಂದು ಜೋರಾಗಿ ಗಂಗಿರೆಡ್ಡಿಗೆ ಕೇಳಿಸುವ ಹಾಗೆ ನುಡಿದಿದ್ದ. ಅಂತಾ ಅಣ್ಣನ ಬಗ್ಗೆ ಊರಿನ ಒಂದಷ್ಟು ಮಂದಿ ಸಂಶಯದ ಮಾತುಗಳನ್ನಾಡುವುದು ಗಂಗಿರೆಡ್ಡಿಗೆ ಹಿಂಸೆ ತರುವ ವಿಷಯವೆ ಆಗಿತ್ತು.

ಹೀಗೆ ಏನೆಲ್ಲವನ್ನೂ ಯೋಚಿಸುತ್ತಾ ಅಡ್ಡಾಡುತ್ತಿದ್ದ ಅವನಿಗೆ ಶನಿಮಹಾತ್ಮೆ ಕಥೆಯಲ್ಲಿ ಕೈಕಾಲು ಕಳೆದುಕೊಂಡ ವಿಕ್ರಮರಾಜನು ಗಾಣಿಶೆಟ್ಟಿಯ ಮನೆಯಲ್ಲಿ ಆಶ್ರಯ ಪಡೆವ ಸನ್ನಿವೇಶ ನೆನಪಿಗೆ ಬರತೊಡಗಿತು. ಅಲ್ಲಿ ವಿಕ್ರಮರಾಜನು ಸುತ್ತುತ್ತಿರುವ ಗಾಣದ ಮೇಲೆ ಕುಳಿತು ಎತ್ತುಗಳನ್ನು ಸದ್ದಿನಿಂದಲೆ ನಡೆಸುತ್ತಾ ಯಾವುದೋ ಸಂತೋಷದ ಗಳಿಗೆಯಲ್ಲಿ ದೀಪಕಮಾಲಾ ರಾಗವನ್ನು ಹಾಡುತ್ತಾನೆ. ಆಗ ಆ ಪಟ್ಟಣದ ಎಲ್ಲ ದೀಪಗಳೂ ಬೆಳಗಿ ರಾತ್ರಿ ಹಗಲಿನಂತಾಗುತ್ತದೆ. ಹಾಗೆ ಅವನು ಹಾಡಿದ ದೀಪಕಮಾಲಾ ರಾಗಕ್ಕೆ ಮನಸೋತೇ ಅಲ್ಲವೆ ಚಂದ್ರಶಯನ ರಾಜನ ಮಗಳಾದ ಪದ್ಮಾವತಿಯು ಕೈಕಾಲು ಇಲ್ಲದ ವಿಕ್ರಮರಾಜನನ್ನು ಮದುವೆಯಾಗಲು ಹೊರಟಿದ್ದು. ಕೈಕಾಲು ಇಲ್ಲದವನನ್ನೆ ಅವನ ಕಲೆಗೆ ಮನಸೋತು ಮದುವೆ ಆಗುವವರು ಇರಬೇಕಾದರೆ ತನಗೇನು ಕಮ್ಮಿ, ತಾನೂ ಈಗ ಅಣ್ಣನ ಆಶ್ರಯದಲ್ಲಿರುವ ಮದುವೆಯಾಗದ ಊನವಂತ. ತಾನೂ ಈ ಲೋಕಕ್ಕೆ ಕೇಳಿಸುವ ಹಾಗೆ ದೀಪಕಮಾಲಾ ರಾಗವನ್ನು ಹಾಡಿದರೆ ಯಾರಾದರೊಬ್ಬರು ಕೇಳಿಸಿಕೊಂಡು ಮನಸೋತು ತನ್ನ ಬಳಿಗೆ ಬರಬಹುದಲ್ಲವೆ ಎಂದುಕೊಂಡ. ಹಾಗೆಯೇ ದೀಪಕಮಾಲಾ ರಾಗ ಹೇಗಿರುತ್ತದೆನ್ನುವುದನ್ನು ನೆನಪಿಸಿಕೊಳ್ಳಲು ಪ್ರಯತ್ನಿಸಿದ. ಕಥೆಯಲ್ಲಿ ದೀಪಕಮಾಲಾ ರಾಗದ ಪ್ರಸ್ತಾಪವಾಗುವುದಾದರೂ ಅದು ಹೇಗಿರುತ್ತದೆನ್ನುವುದನ್ನು ಎಲ್ಲೂ ಉಲ್ಲೇಖಿಸಿಯೆ ಇಲ್ಲವಲ್ಲ. ಒಂದು ರಾಗ ಹೇಗಿರುತ್ತದೆ ಎಂದು ತಿಳಿಸದೆ ಅದನ್ನು ಪ್ರಸ್ತಾಪ ಮಾಡಿ, ಹಾಡಿದ ನಂತರದ ಪರಿಣಾಮಗಳನ್ನು ಮಾತ್ರ ವಿವರಿಸುವ ಹಿಂದಿನ ಉದ್ದೇಶವಾದರು ಏನು? ಯಾಕೋ ಉತ್ತರ ಸಿಗದೆ ತಲೆಯನ್ನು ಒದರಿದ. ಬಹುತೇಕ ಕತ್ತಲಾಗಿತ್ತು. ಸುತ್ತಲೂ ಮರಗಳ ದಟ್ಟಣೆ. ಆ ಕತ್ತಲ ದಟ್ಟಣೆಯೊಳಗಿಂದ ಯಾವುದಾದರು ಮೃಗವೊಂದು ಎಗರಿ ತನ್ನ ಕತ್ತಿಗೆ ಬಾಯಿ ಹಾಕಿದರೆ ಎಂಬ ಅಂಜಿಕೆಯಾಗಿ ಊರಿನ ಕಡೆಗೆ ನಡಿಗೆಯನ್ನು ಬೆಳೆಸಿದ. ಒಂದು ಗಳಿಗೆಯಲ್ಲಿ ತಲೆಯನ್ನು ಮೇಲಕ್ಕೆ ಎತ್ತಿದ. ಮೇಲೆ ಚಂದ್ರ ಎತ್ತುಗಳ ಕಾಲಿಗೆ ಹೊಡೆಯುವ ಲಾಳದಂತೆ ಆಕಾಶಕ್ಕೆ ಮೆತ್ತಿಕೊಂಡಿದ್ದ. ವಿಕ್ರಮರಾಜನ ಆಸ್ಥಾನದಲ್ಲಿ ಯಾವ ಗ್ರಹ ಶ್ರೇಷ್ಠ ಎಂಬ